ಅವರಿಂದ ಪರಿಹಾರ ಪಡೆಯಲು ತಿಳಿಸಲಾಗಿದೆ. ಈ ಕಾರ್ಯಕ್ರಮಗಳಿಂದ ರೈತರಿಗೆ ಎಲ್ಲೆಲ್ಲಿ ಅಗತ್ಯ ವಿದೆಯೋ ಅಲ್ಲಲ್ಲಿ ಬೆಳೆ ಸಾಲಗಳನ್ನು ಪಡೆಯಲು ಕಷ್ಟವಾಗಲಾರದು. ಮತ್ತೊಂದು ಮುಖ್ಯವಾದ ಅಂಶ ಎಂದರೆ, ಮುಂಗಾರು ಬೆಳೆಯು ಮೇ-ಜೂನ್ ತಿಂಗಳಿನಲ್ಲಿ ಪ್ರಾಪ್ತವಾಗುತ್ತದೆ. ಆ ಕಾಲವು ಪ್ರಾಪ್ತವಾಗುವ ಮೊದಲೇ ಮೇಲೆ ಹೇಳಿದ ಕಾರ್ಯಕ್ರಮಗಳನ್ನು ಜಾರಿಗೆ ತಂದು ರೈತರಿಗೆ ತೊಂದರೆ ಆಗದಂತೆ ರಾಜ್ಯ ಸರ್ಕಾರವು ಪ್ರಯತ್ನಿಸುವುದು.

ಶ್ರೀ ಎಸ್ ನಂಜಪ್ಪ.—ತಮಗೆ ಗೊತ್ತಿರುವ ಹಾಗೆ ಖಾಸಗಿಯವರು ಯಾರೂ ರೈತರಿಗೆ ಸಾಲ ಕೊಡುತ್ತಿಲ್ಲ. ಸಹಕಾರ ಸಂಘಗಳೂ ಸಹ ಕೆಲವು ಹಣವನ್ನು ದುರುಪಯೋಗ ಮಾಡಿಕೊಂಡು ರೈತರಿಗೆ ಸಾಲ ಕೊಡುವ ಸ್ಥಿತಿಯಲ್ಲಿ ಇಲ್ಲ. ಗ್ರಾಮೀಣ ಬ್ಯಾಂಕುಗಳು ಇನ್ನು ಸ್ಥಾಪನೆಯಾಗಿವೆ ಅವೂ ಸಹ ಸಾಲ ಕೊಡುತ್ತಿಲ್ಲ. ಷೆಡ್ಯೂಲ್ ಬ್ಯಾಂಕಿನವರು ಮೊದಲೇ ರೈತರನ್ನು ಹೊರಗೆ ಅಟ್ಟುತ್ತಿದ್ದಾರೆ. ಇಂಥ ದುಸ್ಥಿತಿಯಲ್ಲಿರುವ ಸಣ್ಣ ಮತ್ತು ಮಧ್ಯಮ ರೈತರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಎಲ್ಲೆಲ್ಲಿ ಸಹಕಾರ ಸಂಘಗಳು ರೈತರಿಗೆ ಸಾಲ ಕೊಡುವುದಿಲ್ಲವೋ, ಎಲ್ಲಿ ಷೆಡ್ಯೂಲ್ ಬ್ಯಾಂಕು ಮತ್ತು ಗ್ರಾಮೀಣ ಬ್ಯಾಂಕಿಂಗಳು ಸಾಲ ಕೊಟ್ಟಿವೆಯೋ ಅಲ್ಲಿ ಈ ಸಮಸ್ಯೆ ಇದೆ. ಅದಕ್ಕಾಗಿ ಅವರ ಸಭೆಯನ್ನು ಕರೆದು ಒಂದು ನಿರ್ಣಯ ಮಾಡಿದ್ದೇವೆ. ಶೇಕಡ ೫ಕ್ಕಿಂತ ಕಡಿಮೆ ಬೆಳೆ ಬಂದಲ್ಲಿ ಅಲ್ಪಾವಧಿ ಸಾಲವನ್ನು ಮಧ್ಯಮಾವಧಿ ಸಾಲವಾಗಿ ಪರಿವರ್ತಿಸುವುದಕ್ಕೆ ಒಪ್ಪಿಕೊಂಡಿದ್ದಾರೆ. ಅಲ್ಲದೆ ಈಗಾಗಲೇ ಖಾರಿಫ್ ಬೆಳೆ ಬಗ್ಗೆ ಡಿ.ಸಿ.ಯವರು ನೋಟಿಫಿಕೇಷನ್ ಇಶ್ಯೂ ಮಾಡಿದ್ದಾರೆ. ಬ್ಯಾಂಕಿನವರು ನಮ್ಮ ಸಲಹೆಯನ್ನು ಒಪ್ಪಿಕೊಂಡಿದ್ದಾರೆ. ಡಿ.ಸಿ.ಯವರು ರೆಕಮೆಂಡ್ ಮಾಡಿ ಪತ್ರ ಬರೆದರೆ ಅದರ ಆಧಾರದ ಮೇಲೆ ಸಾಲವನ್ನು ಪರಿವರ್ತಿಸುವುದಕ್ಕೆ ಒಪ್ಪಿದ್ದಾರೆ. ನಾವು ಕೊಟ್ಟಿರುವ ಸಲಹೆಯಿಂದ ರೈತರಿಗೆ ಅನುಕೂಲವಾಗುತ್ತದೆ.

ಶ್ರೀ ಕೃಷ್ಣರಾಜೇಂದ್ರ ಮಿಲ್ಸ್, ಮೈಸೂರು, ಶಂಕರ ಟೆಕ್ಸ್‌ಟೈಲ್ ಮಿಲ್ಸ್, ದಾವಣಗೆರೆ ಮತ್ತು ಅಲೆಂಬಿಕ್ ಗ್ಲಾಸ್ ವರ್ಕ್ಸ್, ಬೆಂಗಳೂರು ಇವು ಮೂರು ಕಾರ್ಖಾನೆಗಳನ್ನು ಮುಚ್ಚಿರುವ ಬಗ್ಗೆ.

ಶ್ರೀ ಎಂ ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ಶ್ರೀ ಕೃಷ್ಣ ರಾಜೇಂದ್ರ ಮಿಲ್ಸ್, ಮೈಸೂರು ಶಂಕರ್ ಟೆಕ್ಸ್‌ಟೈಲ್ ಮಿಲ್ಸ್, ದಾವಣಗೆರೆ ಮತ್ತು ಅಲೆಂಬಿಕ್ ಗ್ಲಾಸ್ ವರ್ಕ್ಸ್, ಬೆಂಗಳೂರು ಇವು ಮೂರು ಕಾರ್ಖಾನೆಗಳನ್ನು ಮುಚ್ಚಿರುವ ಬಗ್ಗೆ ನಾನು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜಿ ಪಿಚ್. ಪಟೇಲ್ (ಭಾರೀ ಹಾಗೂ ಮಧ್ಯಮ ಕೈಗಾರಿಕೆಗಳ ಖಾತೆ ಸಚಿವರು).—ಮಾನ್ಯ ಅಧ್ಯಕ್ಷರೇ,

ಶ್ರೀ ಕೃಷ್ಣರಾಜೇಂದ್ರ ಮಿಲ್ಸ್, ಮೈಸೂರು, ಶಂಕರ್ ಟೆಕ್ಸ್‌ಟೈಲ್ ಮಿಲ್ಸ್, ದಾವಣಗೆರೆ ಮತ್ತು ಅಲೆಂಬಿಕ್ ಗ್ಲಾಸ್ ವರ್ಕ್ಸ್, ಬೆಂಗಳೂರು ಇವು ಮೂರು ಕಾರ್ಖಾನೆಗಳು ಮುಚ್ಚಿರುವುದು ನಿಜ.

ಶ್ರೀ ಕೃಷ್ಣರಾಜೇಂದ್ರ ಮಿಲ್ಲನ್ನು ಪುನಃ ಶುರು ಮಾಡುವಂತೆ ಕೆಲವೊಂದು ಪ್ರಯತ್ನಗಳನ್ನು ಮಾಡಲಾಗಿದೆ. ಶ್ರೀ ಕೃಷ್ಣರಾಜೇಂದ್ರ ಮಿಲ್ಸ್‌ನವರು ಕೊಡಬೇಕಾದ ಪೂರಾಣ ತೆರಿಗೆಯನ್ನು ಮುಂದೂಡುವಂತೆ ಆದೇಶವನ್ನು ಸಂಬಂಧಪಟ್ಟ ಇಲಾಖೆಗೆ ನೀಡಲಾಗಿದೆ. ಅದೂ ಅಲ್ಲದೆ ಮಿಲ್ಲಿಗೆ ಬೇಕಾಗುವ ವಿದ್ಯುತ್ ಪೂರೈಕೆ ಎಂದರೆ ಸುಮಾರು ೧.೫ ಲಕ್ಷ ಯೂನಿಟ್‌ಗಳನ್ನು ಹೆಚ್ಚಿಗೆ ಕೊಡುವಂತೆ ಸರ್ಕಾರ ಒಪ್ಪಿಕೊಂಡಿದೆ. ಬೇಕಾಗಿರುವ ಧನಸಹಾಯಕ್ಕಾಗಿ ಕೃಷ್ಣರಾಜೇಂದ್ರ ಮಿಲ್ಸ್‌ನವರು ಐ.ಡಿ.ಬಿ.ಐ. ಹಾಗೂ ಇತರೆ ಬ್ಯಾಂಕುಗಳಿಂದ ವ್ಯವಸ್ಥೆ ಮಾಡಬೇಕಾಗಿದೆ. ಹಣ ಸಹಾಯ ದೊರಕಿದ ನಂತರ ಅವರು ಗಿರಣಿಯನ್ನು ಶುರು ಮಾಡುವುದು ಸಾಧ್ಯ. ಇದೂ ಅಲ್ಲದೆ ಶ್ರೀ ಕೃಷ್ಣ ರಾಜೇಂದ್ರ ಮಿಲ್ಲಿನ ಸ್ವಾಧೀನದಲ್ಲಿರುವ ಹೆಚ್ಚಿನ ಜಮೀನನ್ನು ಮಾರುವುದಕ್ಕೆ ಸರ್ಕಾರ ಅನುಮತಿಯನ್ನು ಕೊಡಬೇಕೆಂದು ಮಿಲ್ ಮಾಲೀಕರು ಕೇಳಿಕೊಂಡಿದ್ದಾರೆ. ಅದು ಸಧ್ಯದಲ್ಲಿ ಪರಿಶೀಲನೆಯಲ್ಲಿದೆ.

ದಾವಣಗೆರೆ ಶ್ರೀ ಶಂಕರ್ ಟೆಕ್ಸ್‌ಟೈಲ್ ಮಿಲ್ಸ್‌ನವರು ತಮ್ಮ ಸ್ವಾಧೀನದಲ್ಲಿರುವ ಜಮೀನನ್ನು ಮಾರಿ ಅದರಿಂದ ಬರುವ ಹಣದಿಂದ ಗಿರಣಿಯನ್ನು ಶುರು ಮಾಡಬಹುದೆಂದು ಸೂಚಿಸಿದ್ದಾರೆ. ಈ ಸಂದರ್ಭದಲ್ಲಿ ಅವರು ಕೊಟ್ಟಿರುವ ಮನವಿಯನ್ನು ರಾಜ್ಯದ ಹಣಕಾಸು ನಿಗಮದರೊಂದಿಗೆ ಚರ್ಚಿಸಿ ಈ ವಿಷಯದಲ್ಲಿ ಸೂಕ್ತವಾದ ನಿರ್ಧಾರವನ್ನು ತೆಗೆದುಕೊಳ್ಳಬಹುದು. ಆದುದರಿಂದ ಈ ವಿಷಯ ಕರ್ನಾಟಕ ರಾಜ್ಯದ ಹಣಕಾಸು ನಿಗಮದವರ ಅಭಿಪ್ರಾಯ ದೊರೆಯುವವರೆವಿಗೂ ಮುಂದಿನ ಕ್ರಮ ತೆಗೆದುಕೊಳ್ಳುವುದು ಸಾಧ್ಯ ಆಗುವುದಿಲ್ಲ. ಸದರಿ ಮಿಲ್ ಖಾಸಗಿ ವಲಯದಲ್ಲಿರುವುದರಿಂದ ಸರ್ಕಾರದಿಂದ ಹಣ ಸಹಾಯ ದೊರೆಯುವುದು ಸಾಧ್ಯವಿಲ್ಲ. ಅವರಿಗೆ ಬೇಕಾಗಿರುವ ಹಣ ಅವರು ಕರ್ನಾಟಕ ರಾಜ್ಯ ಹಣಕಾಸು ನಿಗಮದಿಂದ ಮತ್ತು ಇತರೇ ಬ್ಯಾಂಕುಗಳಿಂದ ಪಡೆಯಬೇಕಾಗುವುದು.

ಬೆಂಗಳೂರಿನಲ್ಲಿರುವ ಅಲೆಂಬಿಕ್ ಗ್ಲಾಸ್ ಕಂಪೆನಿಯು ದಿನಾಂಕ ೨೧-೧೨-೮೫ರಿಂದ ಮೆಸರ್ಸ್ ದರ್ಶಕ್ ಲಿಮಿಟೆಡ್, ಬೆಂಗಳೂರು ಎಂಬ ಸಂಸ್ಥೆಗೆ ವರ್ಗಾಯಿಸಿದ್ದಾರೆ. ಈ ವರ್ಗಾವಣೆಯನ್ನು ಅವರು ಕಾನೂನು ರೀತ್ಯಾ ಮಾಡಿರುವುದರಿಂದ ಇದರಲ್ಲಿ ಯಾವ ಕ್ರಮವೂ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ ತೆಗೆದುಕೊಳ್ಳುವುದು ಸಾಧ್ಯವಿಲ್ಲ. ಈಗ ಹೊಸ ಸಂಸ್ಥೆಯವರು ಅಲೆಂಬಿಕ್ ಗ್ಲಾಸ್ ಕಂಪೆನಿಯನ್ನು ತೆಗೆದುಕೊಂಡಿರುವುದರಿಂದ ಹೊಸ ಸಂಸ್ಥೆಗೆ ಸಾಧ್ಯವಾದಷ್ಟು ಕಾರ್ಖಾನೆಯನ್ನು ಶುರು ಮಾಡುವಂತೆ ಪ್ರಯತ್ನ ಮಾಡಲಾಗುವುದು.

ಶ್ರೀ ಎಂ.ಎಸ್. ಕೃಷ್ಣನ್.—ಸನ್ಮಾನ್ಯ ಅಧ್ಯಕ್ಷರೇ, ಈ ಮೂರು ಕಾರ್ಖಾನೆಗಳೂ ಮುಚ್ಚಿವೆ. ಕೃಷ್ಣರಾಜೇಂದ್ರ ಮಿಲ್ಲನ್ನು ಮುಚ್ಚಿ ಈಗಾಗಲೇ ಎರಡು ವರ್ಷವಾಗಿವೆ. ಮೂರು ಸಾವಿರ ಜನರು ಕಾರ್ಮಿಕರು ಹಸಿವಿನಿಂದ ಬಳಲುತ್ತಿದ್ದಾರೆ. ಈ ಎರಡು ವರ್ಷದಿಂದಲೂ ಸರ್ಕಾರ ಇದರ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ಸಚಿವರು ಉತ್ತರದಲ್ಲಿ ಏನು ಹೇಳಿದ್ದಾರೆ, ಅದು ಹಳೆಯದು. ಹಳೆಯ ಯೋಜನೆಯ ರೀತಿಯಲ್ಲಿ ಅವನ್ನು ಹೇಳುತ್ತಿದ್ದಾರೆ. ಹೊಸದೇನೂ ಇಲ್ಲ. ಪ್ರತಿಯೊಂದು ಸಲವೂ ಸಾಲ ಕೊಡಿಸುವ ಪ್ರಯತ್ನ ಮಾಡುತ್ತಿದ್ದೇವೆ, ಚರ್ಚೆ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ಇದರ ಬಗ್ಗೆ ಏನು ಮಾಡುವುದಕ್ಕೂ ತಯಾರಾಗಿಲ್ಲ, ಮತ್ತೆ ಈಗಲೂ ಅದನ್ನೇ ಹೇಳಿದ್ದಾರೆ. ''ಹಣ ಸಹಾಯ ದೊರಕಿದ ನಂತರ ಅವರು ಗಿರಣಿಯನ್ನು ಶುರು ಮಾಡುವುದು ಸಾಧ್ಯ'' ಇದೂ ಅಲ್ಲದೆ ಶ್ರೀ ಕೃಷ್ಣರಾಜೇಂದ್ರ ಮಿಲ್ಲಿನ ಸ್ವಾಧೀನದಲ್ಲಿರುವ ಹೆಚ್ಚಿನ ಜಮೀನನ್ನು ಮಾರುವುದಕ್ಕೆ ಸರ್ಕಾರ ಅನುಮತಿಯನ್ನು ಕೊಡಬೇಕೆಂದು ಮಿಲ್ ಮಾಲೀಕರು ಕೇಳಿಕೊಂಡಿದ್ದಾರೆ. ಅದು ಸಧ್ಯದಲ್ಲಿ ಪರಿಶೀಲನೆಯಲ್ಲಿದೆ'' ಎಂದು ಹೇಳಿದ್ದಾರೆ. ಯಾವಾಗ ಪರಿಶೀಲನೆಯಾಗುತ್ತದೆ ? ಹಣ ಕೊಡುವುದು ಯಾವಾಗ ? ಮುಚ್ಚಿರುವ ಮಿಲ್ಲನ್ನು ಯಾವಾಗ ತೆರೆಯುತ್ತಾರೆ ? ಕಾರ್ಮಿಕರ ಜೊತೆಗೆ ಒಪ್ಪಂದ ಆಗಿದೆ. ಇದು ಮಂತ್ರಿಗಳಿಗೂ ಗೊತ್ತಿದೆ. ಅನೇಕ ಜನ ಕಾರ್ಮಿಕರು ತಮ್ಮ ಮನೆಯಲ್ಲಿರುವ ಪಾತ್ರೆ ಪರಡಿಗಳನ್ನೆಲ್ಲಾ ಮಾರಿದ್ದಾರೆ. ೪-೫ ಜನ ಕಾರ್ಮಿಕರು ಹೊಟ್ಟೆಗೆ ಹಿಟ್ಟಿಲ್ಲದೆ ಸತ್ತಿದ್ದಾರೆ, ಸರ್ಕಾರ ಇದರ ಬಗ್ಗೆ ತೀವ್ರ ಗಮನ ಹರಿಸಿದೇ ಒಣ ಉತ್ತರವನ್ನು ಕೊಟ್ಟಿರುವುದರಿಂದ ಕಾರ್ಮಿಕರಿಗೆ ಏನು ಪ್ರಯೋಜನ ?

ದಾವಣಗೆರೆ ಶಂಕರ ಮಿಲ್ಸ್ ಅದರ ಪರಿಸ್ಥಿತಿಯೂ ಅಷ್ಟೆ. ಮಾನ್ಯ ಪಂಪಾಪತಿಯವರು ಇದರ ಬಗ್ಗೆ ಹೇಳುತ್ತಿದ್ದಾರೆ. ಅಲ್ಲಿಯೂ ಕೂಡ ಸಮಸ್ಯೆಗಳನ್ನು ಇತ್ಯರ್ಥ ಮಾಡಿಲ್ಲ. ಈ ಶಂಕರ ಟೆಕ್ಸ್‌ಟೈಲ್ಸ್, ಕೃಷ್ಣರಾಜೇಂದ್ರ ಮಿಲ್‌ಗಳನ್ನು ಎನ್.ಟಿ.ಸಿ. ತೆಗೆದುಕೊಳ್ಳುವುದಕ್ಕೆ ಏತಕ್ಕೆ ಒತ್ತಾಯ ಮಾಡುವುದಿಲ್ಲ? ಕರ್ನಾಟಕ ರಿಲೀಫ್ ಅಂಡರ್ ಟೇಕಿಂಗ್ ಆಕ್ಟ್ ಎಂದು ಏತಕ್ಕೆ ತೆಗೆದುಕೊಳ್ಳುವುದಕ್ಕೆ ಧೈರ್ಯ ಮಾಡುವುದಿಲ್ಲ? ಮಾನ್ಯ ಪಟೇಲರು ಸೋಷಿಯಲಿಸ್ಟ್. ಈಗ ಸೋಷಿಯಲ್ಲಿಸ್ಟೋ ಏನೋ ಗೊತ್ತಿಲ್ಲ. ಸೋಷಿಯಲಿಸ್ಟ್ ಇದ್ದವರು ಜನತಾ ಪಕ್ಷದಲ್ಲಿದ್ದಾರೆ. ಈ ಸಮಾಜವಾದದಂತಹ ವಿಷಯದಲ್ಲಿ ತೀರ್ಮಾನ ಮಾಡುವುದಕ್ಕೆ ಆಗುವುದಿಲ್ಲ ಎಂದರೆ ಹೇಗೆ ? ಬೆಂಗಳೂರಿನಲ್ಲಿರುವ ಅಲೆಂಬಿಕ್ ಗ್ಲಾಸ್ ಕಂಪೆನಿಯನ್ನು ಮೆಸರ್ಸ್ ದರ್ಶಕ್ ಲಿಮಿಟೆಡ್‌ಗೆ ವರ್ಗಾಯಿಸಿದ್ದರ ಬಗ್ಗೆ ಧರಣಿ ಮಾಡಿದ್ದಾರೆ, ಸತ್ಯಾಗ್ರಹ ಮಾಡಿದ್ದಾರೆ ಎಂದು ಬಜ್ಜೇಗೌಡರು ಪ್ರಶ್ನೆಯನ್ನು ಕೇಳಿದ್ದರು. ಆದೇ ರೀತಿ ಅಲ್ಲೂ ಕೂಡ ಏನೂ ಆಗಿಲ್ಲ. ಹೇಳುವ ಮಾತನ್ನು ಕೇಳದೆ ಉಲ್ಲಂಘಿಸಿರುವುದನ್ನು ನೋಡಿದರೆ ಸರ್ಕಾರದ ಮೇಲೆ ಅನುಮಾನ ಬರುತ್ತದೆ. ಈ ಸರ್ಕಾರ ಅಲೆಂಬಿಕ್ ಗ್ಲಾಸ್ ಫ್ಯಾಕ್ಟರಿಯ ಜೊತೆ ಶಾಮೀಲಾಗಿದೆ ಇಲ್ಲದಿದ್ದರೆ ಇಷ್ಟು ಹೊತ್ತಿಗೆ ಇದನ್ನು ತೀರ್ಮಾನ ಮಾಡುತ್ತಿದ್ದರು. ಅದಕ್ಕೆ ಇವರು ಹೇಳಿದ್ದಾರೆ, ಕ್ಲೋಸ್ ಮಾಡುವುದಕ್ಕೂ ಅವಕಾಶ ಮಾಡಿಕೊಟ್ಟಿಲ್ಲ ಅಷ್ಟೇ ಅಲ್ಲ ಬೇರೆ ಯಾವುದೇ ಕ್ರಮ ತೆಗೆದುಕೊಳ್ಳು

ವುದಕ್ಕೂ ಅವಕಾಶ ಮಾಡಿಕೊಟ್ಟಿಲ್ಲ. ಬೇರೆಯವರು ಮಾಡಿದ್ದಾರೆ, ಬೇರೆ ಏನು ಮಾಡುವುದಕ್ಕೂ ಅವಕಾಶ ಮಾಡಿಕೊಟ್ಟರೂ ಕ್ರಮವನ್ನು ತೆಗೆದುಕೊಳ್ಳದೇ ಹೀಗೆಯೇ ಕಾರ್ಮಿಕರು ಎಷ್ಟು ದಿವಸ ಎಂದು ಸಾಯಂಬೇಕು. ಇದರ ಬಗ್ಗೆ ನಿಮ್ಮ ನೀತಿ, ನಿಲುವು ಏನೂ ಸರಿಯಾಗಿಲ್ಲ. ತೀರಾ ಕಾರ್ಮಿಕರ ವಿರೋಧಿ ಎನ್ನುವುದಂತೂ ಸ್ಪಷ್ಟ. ನೀವಾದರೂ ಇದರ ಬಗ್ಗೆ ಒಂದು ದಿಟ್ಟವಾದ ನಿಲುವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇಂಥ ಕಾರ್ಖಾನೆಗಳನ್ನು ತೆಗೆದು ಕೊಳ್ಳಲಿಕ್ಕೆ ಅನೇಕ ಜನ ಸಿದ್ಧರಿದ್ದಾರೆ. ನಾವು ನಡೆಸುತ್ತೇವೆ. ಕಾರ್ಮಿಕರಿಗೆ ಎಲ್ಲಾ ಸಹಾಯವನ್ನು ಮಾಡುತ್ತೇವೆ ಎಂದು ಹೇಳುವವರೂ ಇದ್ದಾರೆ. ಆದ್ದರಿಂದ ಇವರ ಬಗ್ಗೆ ಯೋಚನೆ ಮಾಡಿ. ರಾಜಕೀಯ ಸರಿಯಾದುದಲ್ಲ. ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಅದೂ ಕೂಡ ಒಂದು ವರ್ಷ ಮುಚ್ಚಿತ್ತು. ಮಾನ್ಯ ದೇವರಾಜ ಅರಸ್ ಇದ್ದಂಥ ಕಾಲದಲ್ಲಿ ಈ ಮನೆಯಲ್ಲಿ ಪ್ರಶ್ನೆ ಬಂದಾಗ ರಿಲೀಫ್ ಅಂಡರ್ ಟೇಕಿಂಗ್ ಆ್ಯಕ್ಟ್ ಬಂತು ಈ ಫ್ಯಾಕ್ಟರಿ ಕೆಲಸ ನಡೆಯುತ್ತಿದೆ. ಕಾರ್ಮಿಕರಿಗೆ ಅನುಕೂಲವಾಗಿದೆ. ಗೊಂದಲ ಇಲ್ಲವೇ ಇಲ್ಲ. ಆದ್ದರಿಂದ ಇವರ ಬಗ್ಗೆ ಯೋಚನೆ ಮಾಡಿ, ವ್ಯವಸ್ಥೆ ಮಾಡುತ್ತೇನೆ. ಎಂದು ಸ್ಪಷ್ಟವಾದ ಉತ್ತರವನ್ನು ನಿಮ್ಮಿಂದ ಕೇಳುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಕೃಷ್ಣನ್‌ರವರು ಹೇಳಿದ್ದಾರೆ. ಇದು ಹೇಳಿಕೆ ಹೊಸದಲ್ಲ. ಒಪ್ಪುತ್ತೇನೆ. ಹೊಸದು ಏನೂ ಇಲ್ಲ. ವಸ್ತು ಸ್ಥಿತಿಯೇ ಆ ರೀತಿ ಇದೆ. ಮಿಲ್ ಹಳೆಯದು. ವರ್ಕರ್ಸ್ ಹಳಬರು. ಇದು ಹಳೆಯದಾದ ಸಮಸ್ಯೆ. ಇದರಲ್ಲಿ ಹೊಸದು ಏನನ್ನೂ ಹೇಳಿಲ್ಲ. ತಮಗೆ ಗೊತ್ತಿರುವ ಹಾಗೆ ಇದರಲ್ಲಿ ಅಂಟಿ ಲೇಬರ್ ಎಂದು ಹೇಳುತ್ತಾರೆ. ಇದು ಸರ್ವತಾ ಒಪ್ಪತಕ್ಕಂಥ ಮಾತಲ್ಲ. ಯೂನಿಯನ್ ಲೀಡರ್ಸ್‌ಗಳನ್ನು ಕರೆದು ಕೇಳಿ. ಕೃಷ್ಣರಾಜೇಂದ್ರ ಮಿಲ್ಲಿನ ಮಾಲೀಕರನ್ನು ಕರೆದು ಕೇಳಿ. ಅವರಿಗೆ ರಿಲೀಫ್ ಅಂಡರ್ ಟೇಕಿಂಗ್ ಮೂಲಕ ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದ್ದೇವೆ.

ಶ್ರೀ ಎಂ.ಎಸ್. ಕೃಷ್ಣನ್.—ಏತಕ್ಕೆ ಆಗುವುದಿಲ್ಲ ಎಂದು ಹೇಳುತ್ತೀರಿ. ಇದರ ಬಗ್ಗೆ ಯೋಚನೆ ಯನ್ನು ಮಾಡಿದ್ದೀರಾ ?

ಶ್ರೀ ಜೆ. ಹೆಚ್. ಪಟೇಲ್.—ಕಾರ್ಮಿಕರಿಗೆ ಆಗಿರತಕ್ಕಂಥ ಕಷ್ಟಗಳ ಬಗ್ಗೆ ನಿಜವಾಗಲೂ ಸರ್ಕಾರದ ಮನಮಿಡಿಯುತ್ತದೆ. ನಾವು ಇದರ ಬಗ್ಗೆ ಸೆನ್ಸಿಟೀವ್ ಆಗಿಲ್ಲವೆಂದು ಮಾನ್ಯ ಸದಸ್ಯರು ತಿಳಿಯಬಾರದು. ನಾನು ಬೇರೆ ಉದಾಹರಣೆಯನ್ನು ಕೊಡಬಹುದು. ಮುಚ್ಚಿದ ಕಾರ್ಖಾನೆಗಳ ಬಗ್ಗೆಯೂ ಕೆಲಸ ಮಾಡತಕ್ಕಂಥ ವರ್ಕರ್ಸ್ ಬಗ್ಗೆ ಸೆನ್ಸಿಟೀವ್ ಆಗಿರಬೇಕು. ಆದರೆ ಸರ್ಕಾರಕ್ಕೆ ರಾಜ್ಯ ಸರ್ಕಾರಕ್ಕೆ ಒಂದು ಇತಿಮಿತಿ ಇದೆ ಹಣಕಾಸಿನ ಇತಿಮಿತಿ, ಕಾನೂನು ಚೌಕಟ್ಟು ಇದೆ. ಕಾರ್ಮಿಕರಿಗೆ ಪ್ರಯೋಜನ ಆಗುವುದಕ್ಕೆ ಎಷ್ಟು ಸಹಾಯ ಮಾಡಬಹುದೋ ಅಷ್ಟು ಮಾಡಬಹುದು. ನೀವು ಸೇಲ್ಸ್ ಟ್ಯಾಕ್ಸ್ ಕೊಡುವುದು ಬೇಕಾಗಿಲ್ಲ. ಮತ್ತು ಜಾಸ್ತಿ ವಿದ್ಯುತ್ತನ್ನು ಕೊಡುತ್ತೇವೆ. ಕರ್ನಾಟಕ ಸರ್ಕಾರದ ನೀವು ಏನಾದರೂ ಕೊಡತಕ್ಕ ಬಾಕಿಗಳು ಇದ್ದರೆ ಇನ್ವೆಸ್ಟ್‌ಮೆಂಟ್‌ನ್ನು ಕೊಡುವುದಕ್ಕೆ ಅವಕಾಶ ಕೊಡುತ್ತೇವೆ. ಐ.ಡಿ.ಬಿ.ಐ.ನವರು ಒಂದೆರಡು ಸಾರಿ ಬಂದು ಮಂಜುನಾಥ್ ಅವರ ಹತ್ತಿರ ಕೂತು ಹಣ ತಂದು ಪ್ರಾರಂಭಿಸುತ್ತೇವೆ ಎಂದು ಹೇಳಿದರು. ನಾವು ಏನು ಮಾಡುವುದು ಇದೆ. ಹೆಚ್ಚುವರಿ ಜಮೀನು ಇದೆ. ಆ ಜಮೀನನ್ನು ಮಾರಾಟ ಮಾಡಿದರೆ ಅದರಿಂದಲೂ ದುಡ್ಡು ಬರುತ್ತದೆ. ಇನ್‌ವೆಸ್ಟ್‌ಮೆಂಟ್ ಮಾಡುತ್ತೇವೆ. ಈ ವಿಚಾರ ಪರಿಶೀಲನೆಯಲ್ಲಿದೆ. ಮಾನ್ಯ ಕೃಷ್ಣನ್‌ರವರಿಗೆ ಇದು ಗೊತ್ತಿದೆ. ಅವರು ಗೊತ್ತಿಲ್ಲದೆ ಇರುವ ಹಾಗೆ ಹೇಳಬಾರದು. ಕಾನೂನು ತೊಡಕು ಇಲ್ಲಿದೆ. ಕೆ.ಆರ್. ಮಿಲ್ಲನ್ನು ಪ್ರಾರಂಭ ಮಾಡುವಂಥ ವಿಷಯದಲ್ಲಿ ರಾಜ್ಯ ಸರ್ಕಾರ ಎಷ್ಟು ಪ್ರಯತ್ನ ಮಾಡಿದೆ ಎಂದರೆ ಕೇಂದ್ರ ಸರ್ಕಾರದ ಮಂತ್ರಿಗಳು ಬಂದಾಗ ಪುರಾತನವಾದಂಥ, ಬಹಳ ಹೆಸರಾದಂಥ ಮಿಲ್‌ಗಳು. ನೀವು ಗುಜರಾತಿನಲ್ಲಿ ಸಿಕ್ ಮಿಲ್‌ಗಳನ್ನು ತೆಗೆದುಕೊಳ್ಳುತ್ತೀರಿ, ಮಹಾರಾಷ್ಟ್ರದಲ್ಲಿ ಮಿಲ್‌ಗಳನ್ನು ತೆಗೆದುಕೊಳ್ಳುತ್ತೀರಿ. ನಮ್ಮದನ್ನು ತೆಗೆದುಕೊಳ್ಳಿ ಎಂದು ಕೇಂದ್ರ ಟೆಕ್ಸ್‌ಟೈಲ್‌ಗೆ ಸಂಬಂಧಪಟ್ಟ ಮಂತ್ರಿಗಳು ಬಂದಾಗ ಹೇಳಿದ್ದೇವೆ. ಅವರು ಸರ್ವಥಾ ಆಗುವುದಿಲ್ಲ ಎಂದೂ ಹೇಳಿದರು. ಕೌನ್ಸಿಲ್‌ನಲ್ಲಿ ಈ ಮಾತು. ಬಂದಾಗ, ಇಂಡಸ್ಟ್ರೀಸ್ ಮಿನಿಸ್ಟರ್ ಬಂದಾಗ ಶ್ರೀ ಎನ್.ಡಿ.ತಿವಾರಿಯವರು ಬಂದಾಗ ಹೇಳಿದ್ದೇವೆ. ಐ.ಐ.ಎಸ್.ಎಲ್., ಕೆ.ಆರ್. ಮಿಲ್ ಇವುಗಳ ಬಗ್ಗೆ ಸರ್ಕಾರ ಉಪೇಕ್ಷೆ ಮಾಡಿಲ್ಲ. ಏನೂ ಮಾಡಬೇಕು ಹೇಳಿ. ಹಣಕಾಸಿನ ಇತಿಮಿತಿ ಇದೆ. ಈ ಕಂಪನಿಗಳ ಮಾಲೀಕರುಗಳಿಗೂ

ಹೇಳಿದ್ದೇವೆ. ಮಾನ್ಯ ಕೃಷ್ಣನ್‌ರವರು ಸರ್ಕಾರವೇ ತೆಗೆದುಕೊಂಡು ನಡೆಸಿ ಎಂದು ಹೇಳಿದರೆ ಆ ರೀತಿ ನಡೆಸಲಿಕ್ಕೆ ಬರುವುದಿಲ್ಲ. ತೆಗೆದುಕೊಳ್ಳುವುದಕ್ಕಾಗುತ್ತದಿಲ್ಲ, ಶಂಕರ್ ಮೆಲ್ಸ್‌ನ್ನು ತೆಗದುಕೊಳ್ಳುವುದಕ್ಕಾಗುವುದಿಲ್ಲ. ಟೆಕ್ನಿಕಲ್ ಆಡ್ವೈಸ್ ಬೇಕಾದರೆ ಕೊಡಬಲ್ಲೆವು. ಕೆ.ಆರ್. ಮಿಲ್‌ಗಳ ಬಗ್ಗೆ ಐ.ಡಿ.ಬಿ.ಐ.ನವರು ಮಂತ್ರಿಯವರೊಡನೆ ಮಾತನಾಡಿದ್ದಾರೆ. ೩೦ ಲಕ್ಷ ರೂಪಾಯಿ ಒದಗಿಸಿದರೆ ಅದಕ್ಕೆ ಬೇಕಾಗತಕ್ಕಂಥ ಒಂದೂವರೆ ಕೋಟಿ ರೂಪಾಯಿ ಅಡ್ವಾನ್ಸನ್ನು ಕೊಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಮಾಲೀಕರನ್ನು ನೆಗೋಷಿಯೇಟ್ ಮಾಡುತ್ತಿದ್ದಾರೆ. ಇದು ಯಶಸ್ವಿಯಾಗಲಿ ಎಂದು ಹಾರೈಸಬಹುದು. ಆದಷ್ಟು ಬೇಗ ಪ್ರಾರಂಭ ಮಾಡುತ್ತೇವೆ ಎಂದು ಹೇಳಿದ್ದಾರೆ. ಐ.ಡಿ.ಬಿ.ಐ.ನವರು ಒಂದೂವರೆ ಕೋಟಿ ರೂಪಾಯಿ ಕೊಟ್ಟರೆ ಮಿಲ್ ಪ್ರಾರಂಭವಾಗುತ್ತದೆ. ಜಮೀನಿನ ಒತ್ತುವರಿ ಪ್ರಶ್ನೆಯನ್ನು ಆದಷ್ಟು ಬೇಗ ಬಗೆಹರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಅದು ರಾಜ್ಯ ಸರ್ಕಾರದ ಕಾನೂನು ಚೌಕಟ್ಟಿನಲ್ಲಿರತಕ್ಕಂಥದ್ದು. ಮಾನ್ಯ ಕೃಷ್ಣನ್‌ರವರು ಇಷ್ಟೊಂದು ಹತ್ತಿರ ಇದ್ದು ನೋಡಿ ನಮ್ಮ ಕೆಲಸಗಳನ್ನೆಲ್ಲಾ ನೋಡಿ ಈ ರೀತಿ ಮಾತನಾಡುವುದು ಸರಿಯಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಎರಡು ವರ್ಷ ಆಯಿತಲ್ಲಾ. ಏನು ಮಾಡಬೇಕು ಹೇಳಿ

ಶ್ರೀ ಯು. ಭೂಪತಿ.—ಎರಡು ವರ್ಷದಿಂದಲೂ ಇದೇ ರೀತಿ ಹೇಳುತ್ತಿದ್ದರೆ ಹೊಟ್ಟೆ ತುಂಬುವುದೇ ?

ಶ್ರೀ ಜೆ. ಹೆಚ್. ಪಟೇಲ್.—ಎರಡರ ವರ್ಷ ಅಲ್ಲ. ನನ್ನ ಡಿಮ್ಯಾಂಡ್ ಬಂದಾಗ ಆ ಮಾತು ಹೇಳುತ್ತೇನೆ. ಶಂಕರ್ ಟೆಕ್ಸ್‌ಟೈಲ್ ಮಿಲ್‌ನ ಹೆಚ್ಚುವರಿ ಜಮೀನನ್ನು ಮಾರಾಟ ಮಾಡಿದ್ದಾರೆ. ಕೆ. ಎಸ್. ಎಫ್, ಸಿ. ಯವರಿಗೂ ಹೇಳಿದ್ದೇವೆ. ನಮಗೆ ವರ್ಕರ್ಸ್ ಬಗ್ಗೆ ಇಂಟರೆಸ್ಟ್ ಇದೆ. ಕೆ. ಎಸ್ ಎಫ್, ಸಿ. ಯವರಿಗೆ ಕೆಲವು ಸಂಶಯಗಳು ಇವೆ. ಈಗ ಅದನ್ನು ಸದನದಲ್ಲಿ ಹೇಳಲಾರೆ ಮಾಲೀಕರ ಹಿಂದಿನ ವರ್ತನೆ ಬಗ್ಗೆ ಹಣ ಕೊಟ್ಟಿರುವುದರ ಬಗ್ಗೆ ಸಂಶಯ ಇದೆ. ಶಂಕರ್ ಟೆಕ್ಸ್‌ಟೈಲ್‌ನ ಎಕ್ಸ್‌ಟ್ರಾ ಜಮೀನನ್ನು ಮಾರಾಟ ಮಾಡಿ ೭೦ ಲಕ್ಷ ರೂಪಾಯಿ ಬರುವುದಾದರೆ ಅದನ್ನು ಮಾರಿ ಕಂಪೆನಿಗೆ ಇನ್‌ವೆಸ್ಟ್ ಮಾಡಿ ಎಂದು ಹೇಳಿದ್ದೇವೆ. ಅಲೆಂಬಿಕ್ ಗ್ಲಾಸ್ ಫ್ಯಾಕ್ಟರಿ ಬಗ್ಗೆ ಹೇಳಂವುದಾದರೆ ನಾನು ಪವರ್ ಮಿನಿಸ್ಟರ್ ಆಗಿದ್ದಾಗ ಅಲ್ಲಿ ಹೋಗಿದ್ದೆ. ಅದು ಪೂರ್ಣ ವಿದ್ಯುಚ್ಛಕ್ತಿ ಮೇಲೆ ನಡೆಯತಕ್ಕ ಕಾರ್ಖಾನೆ. ಅಲ್ಲಿ ವಿದ್ಯುತ್ ಕಡಿತ ಆಗಬಾರದು. ಗ್ಲಾಸ್ ಆಗುವಾಗ ವಿದ್ಯುಚ್ಛಕ್ತಿ ಆಫ್ ಆದರೆ ಗ್ಲಾಸ್ ಆಗುವುದು ಕಷ್ಟವಾಗುತ್ತದೆ. ತೊಂದರೆಯಾಗುತ್ತದೆ. ಅದಕ್ಕಾಗಿಯೇ ಅಲೆಂಬಿಕ್ ಗ್ಲಾಸ್ ಕಂಪೆನಿಯವರಿಗೆ ಏನಾದರೂ ಮಾಡಿ ವಿದ್ಯುಚ್ಛಕ್ತಿ ಕೊಡಬೇಕೆಂದು ಹೇಳುವುದು. ವಿ.ಐ.ಎಸ್.ಎಲ್.ವವರಿಗೂ ಕೊಡದಿದ್ದರೆ ಇದೇ ರೀತಿ ಕಷ್ಟವಾಗುತ್ತಿತ್ತು. ವಿದ್ಯುತ್ ಕೊರತೆಯಿಂದ ಕಾರ್ಖಾನೆಯನ್ನು ಮುಚ್ಚಿದ್ದಾರೆ ವರ್ಕರ್ಸ್‌ಗೂ ಮ್ಯಾನೇಜ್‌ಮೆಂಟಿಗೂ ಏನು ವಿವಾದ ನಡೆದಿದೆ ಅದನ್ನು ಶಾಂತಿಯುತವಾಗಿ ಬಗೆಹರಿಸುವುದಕ್ಕೆ ನಾವು ಎಲ್ಲ ಪ್ರಯತ್ನ ಮಾಡಿದ್ದೇವೆ. ಮಾನ್ಯ ಸದಸ್ಯರು ಹೇಳಿದ್ದು ನಿಜ. ಯಾರಿಗೂ ಗೊತ್ತಿಲ್ಲದಂತೆ ಟ್ರಾನ್ಸ್‌ಫರ್ ಮಾಡಿದ್ದಾರೆ. ಅದರ ಬಗ್ಗೆ ಕಾನೂನು ರೀತಿಯ ಕ್ರಮ ತೆಗೆದುಕೊಳ್ಳಬಹುದೇ ಹೊರತು ಬೇರೆರೀತಿ ಮಾಡುವುದಕ್ಕಾಗುವುದಿಲ್ಲ ಎಂದು ಅದಕ್ಕೇ ನಾನು ಹೇಳಿದ್ದು. ಒಂದು ಸರ್ಕಾರದ ಮೇಲೆ ಆರೋಪ ಹೊರಿಸುವುದು ಬಹಳ ಸುಲಭ.

ಶ್ರೀ ಎಂ. ಎಸ್. ಕೃಷ್ಣನ್.—ನೀವು ಹೇಳಿದ್ದನ್ನು ಕೇಳಿಕೊಂಡು ಸುಮ್ಮನಿರುವುದಕ್ಕಾ ನಾವಿರುವುದು ? ನನಗೆ ಅರ್ಥವಾಗುವುದಿಲ್ಲ.

ಅಧ್ಯಕ್ಷರು.—ಮಂತ್ರಿಗಳು ಹೇಳಿಯಾಯಿತಲ್ಲ.

ಶ್ರೀ ಜೆ. ಎಚ್. ಪಟೇಲ್.—ನಮ್ಮ ಸರ್ಕಾರ ಅಲೆಂಬಿಕ್ ಕಾರ್ಖಾನೆ ಮಾಲೀಕರಿಗೆ ಸಾಕಷ್ಟು ಸೂಚನೆ, ತಿಳಿವಳಿಕೆ ಮತ್ತು ಎಚ್ಚರಿಕೆಯನ್ನು ಕೊಟ್ಟಿದೆ. ಇನ್ನೊಮ್ಮೆ ಕೊಡುತ್ತೇನೆ. ಮತ್ತೆ ಕಾರ್ಖಾನೆಯನ್ನು ಪ್ರಾರಂಭ ಮಾಡುವುದಕ್ಕೆ ಅಥವಾ ಯಾರಿಗೆ ಟ್ರಾನ್ಸ್‌ಫರ್ ಮಾಡಿದ್ದಾರೋ ಅವರಿಂದಲೇ ಪುರು ಮಾಡಿಸುವುದಕ್ಕೆ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಪಂಪಾಪತಿ.—ಹಲವಾರು ವಿಷಯಗಳನ್ನು ಸಚಿವರು ಹೇಳಿದ್ದಾರೆ. ಪದೇಪದೇ ಅದನ್ನು ನಾನು ಹೇಳುವುದಿಲ್ಲ. ಮೈಸೂರು ಮಿಲ್ಸ್ ಬಗ್ಗೆ ಈಗ ಹೇಳಿದ್ದಾರೆ. ಅವರನ್ನು ಕರೆಸಿ ಕೆಲಸ

ಮಾಡಲೇಬೇಕು ಎಂದರೆ ಆಗುತ್ತದೆ ಅವರು ಬರುವುದಿಲ್ಲ. ಇವರು ಕರೆಸುವುದಿಲ್ಲ. ಒಂದು ವೇಳೆ ಬಂದರೆ ಅವರ ಟೈಮಿಗೆ ಇವರು ಇರುವುದಿಲ್ಲ. ಎರಡು ವರ್ಷದಿಂದ ಕೆಲಸಗಾರರು ಬಂದು ಹೋಗುತ್ತಿದ್ದಾರೆ. ನಾವು ಮಾಡುತ್ತಿದ್ದೇವೆ ಎಂದು ಹೇಳಿದ್ದೀರಿ. ಏನು ಮಾಡಿದ್ದೀರಿ ಎಂಬುದು ಮುಖ್ಯ. ಶಂಕರ್ ಟೈಕ್ಸ್‌ಟೈಲ್ ಮಿಲ್ಸ್ ಮುಚ್ಚಿ ಒಂದೂವರೆ ವರ್ಷದ ಮೇಲಾಯಿತು. ಮೈಸೂರಿನವರಿಗೆ ರಿಲೀಫ್ ಅಂಡರ್‌ಟೇಕಿಂಗ್ ಕೊಟ್ಟಿದ್ದಾರೆ. ಶಂಕರ್ ಮಿಲ್ಸ್‌ಗೆ ಕೊಟ್ಟಿಲ್ಲ. ಅವರಿಗೆ ಅನೇಕ ಸಾಲ ಇದೆ. ಜಾಗ ಮಾರಿದರೆ ಸಾಲಗಾರರು ತೆಗೆದುಕೊಂಡು ಹೋಗುತ್ತಾರೆ ಆದ್ದರಿಂದ ಮಾರಾಟ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟರೂ ಅವರು ಅದಕ್ಕೆ ತಯಾರಿಲ್ಲ. ಮಾಲೀಕರನ್ನು ಕರೆಸಿ ನೀವು ಮಾತನಾಡಿ, ನಾವೂ ಬರುತ್ತೇವೆ. ಅಧಿಕಾರಿಗಳನ್ನು ಕರೆಸಿ, ಬ್ಯಾಂಕ್‌ನವರನ್ನು ಕರೆಸಿ ತಕ್ಷಣ ಮಿಲ್ ಪ್ರಾರಂಭ ಮಾಡಬೇಕೆಂದು ಹೇಳಿ. ಅದನ್ನು ಏತಕ್ಕೆ ಮಾಡುವುದಕ್ಕಾಗುವುದಿಲ್ಲ ? ಸಾವಿರಾರು ಜನ ಕಾರ್ಮಿಕರು ಕೆಲಸ ಇಲ್ಲದೇ ಇದ್ದರೆ ಅವರ ಪರಿಸ್ಥಿತಿ ಏನಾಗಬೇಕು ? ಎರಡು ವರ್ಷದಿಂದ ಈ ರೀತಿ ಇದ್ದರೆ ಅವರು ಏನು ಮಾಡಬೇಕು ? ಕ್ರಮ ತೆಗೆದುಕೊಂಡಿದ್ದೇವೆ ಎಂದು ಹೇಳಿದ್ದೀರಿ ಆದರೆ ಅವರಿಗೆ ಕೆಲಸ ಕೊಟ್ಟಹಾಗೆ ಆಯಿತಾ ? ಕೈಗಾರಿಕೆಗಳು ಪ್ರಾರಂಭವಾಗಿದೆಯೆ ? ಅಲ್ಲಿ ಉತ್ಪಾದನೆ ಆಗುತ್ತಿದೆಯೆ ? ಕೈಗಾರಿಕೆಗಳು ಪ್ರಾರಂಭವಾಗಿದ್ದರೆ ಉತ್ಪಾದನೆ ಆಗುತ್ತಿತ್ತು. ಸರ್ಕಾರಕ್ಕೆ ಆದಾಯ ಬರುತ್ತಿತ್ತು. ಬರೀ ಆದಾಯ ತೆಗೆದುಕೊಳ್ಳುವುದಕ್ಕೆ ಸರ್ಕಾರ, ಆದರೆ ತೊಂದರೆ ಬಂದಾಗ ಅದು ನನಗೆ ಗೊತ್ತಿಲ್ಲ ಎಂದರೆ ಸರ್ಕಾರ ಎಲ್ಲಿದೆ ಎಂದು ಕೇಳಬೇಕಾಗುತ್ತದೆ.

ಶ್ರೀ ಜೆ. ಹೆಚ್. ಪಟೇಲ್.—ಸರ್ಕಾರದ ಇತಿಮಿತಿಯನ್ನು ನಾನು ಹೇಳಿದ್ದೇನೆ. ಕಾರ್ಮಿಕರ ಹಿತರಕ್ಷಣೆಗೆ ನಾವು ಏನು ಮಾಡಬೇಕೋ ಮಾಡಿದ್ದೇವೆ. ಅಧಿಕಾರಿಗಳಿಗೆ ಮಾಲೀಕರಿಗೆ ಎಷ್ಟು ಎಚ್ಚರಿಕೆ ಕೊಡಬೇಕೋ ಕೊಟ್ಟಿದ್ದೇವೆ.

ಶ್ರೀ ಪಂಪಾಪತಿ.—ಕೈಗಾರಿಕೆ ಪ್ರಾರಂಭವಾಗಬೇಕೆಂದು ನಾವು ಕೇಳುವುದು.

ಶ್ರೀ ಜೆ. ಎಚ್. ಪಟೇಲ್.—ಖಾಸಗಿ ಕಾರ್ಖಾನೆಯನ್ನು ನಡೆಸತಕ್ಕದ್ದು...

ಶ್ರೀ ಪಂಪಾಪತಿ.—ರಿಲೀಫ್ ಅಂಡರ್‌ಟೇಕಿಂಗ್ ಶಂಕರ್ ಟೆಕ್ಸ್‌ಟೈಲ್ ಮಿಲ್ಸ್‌ಗೆ ಕೊಟ್ಟಿಲ್ಲ. ಅಲ್ಲಿ ಸಾಲಗಾರರ ಕಾಟ ಜಾಸ್ತಿ ಇದೆ.

ಶ್ರೀ ಜೆ. ಎಚ್. ಪಟೇಲ್.—ಅವರಿಗೆ ಕೊಡುವುದಕ್ಕೆ ಬರುವುದಿಲ್ಲ

ಶ್ರೀ ಪಂಪಾಪತಿ.—ಏತಕ್ಕೆ ಬರುವುದಿಲ್ಲ ?

ಶ್ರೀ ಜೆ. ಎಚ್. ಪಟೇಲ್.—ಅದಕ್ಕೆ ಕೆಲವು ನಾರ್ಮ್ಸ್ ಇದೆ. ಮನಸ್ಸಿಗೆ ಬಂದಹಾಗೆ ಕೊಡುವುದಕ್ಕಾಗುವುದಿಲ್ಲ.

ಶ್ರೀ ಪಂಪಾಪತಿ.—ನಾರಮ್ಸ್ ಎಲ್ಲರಿಗೂ ಒಂದೇ ಅಲ್ಲವೆ ?

ಶ್ರೀ ಜೆ. ಎಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಸರ್ಕಾರ ಎಂದರೆ ಏನುಬೇಕಾದರೂ ಮಾಡಬಹುದು ಎಂದು ಮಾನ್ಯ ಸದಸ್ಯರು ತಿಳಿದುಕೊಂಡಿದ್ದಾರೆ. ಅದಕ್ಕೆ ಕೆಲವು ನಾರ್ಮ್ಸ್ ಇದೆ. ಅದು ಮಾನ್ಯ ಸದಸ್ಯರಿಗೂ ಗೊತ್ತಿದೆ. ಈಗಾಗಲೇ ನಾಲ್ಕು ಕಾರ್ಖಾನೆಗಳಿಗೆ ತಾನೂನಿನ ಪರಿಮಿತಿಯಲ್ಲಿ ಮಾಡಿದ್ದೇವೆ. ನಂದಿಹಳ್ಳಿಯದು ಪ್ರಾರಂಭ ಆಗಲಿದೆ. ನಾವು ಮಾಡಿದ್ದನ್ನು ಅವರು ಹೇಳುವುದಿಲ್ಲ. ಎಲ್ಲೋ ಒಂದು ಕಡೆ ಆಗದೇ ಇದ್ದರೆ, ರಿಪೇರಿ ಆಗದೇ ಇರುವುದಕ್ಕೆ ಸಾಧ್ಯವಿಲ್ಲದೇ ಇರುವುದನ್ನು ರಿಪೇರಿ ಮಾಡಿ ಎಂದರೆ ಹೇಗೆ ಮಾಡುವುದು ?

ಶ್ರೀ ಪಂಪಾಪತಿ.—ಪ್ರಯತ್ನಪಟ್ಟರೆ ಆಗುತ್ತದೆ.

ಶ್ರೀ ಕೆ. ಬಿ. ಶಾಣಪ್ಪ.—ಮಾನ್ಯ ಅಧ್ಯಕ್ಷರೇ, ಜೆ. ಎಚ್. ಪಟೇಲರು ಬಹಳ ಪ್ರಯತ್ನ ಮಾಡಿದ್ದೇವೆಂದು ಹೇಳಿದ್ದಾರೆ. ಆದರ ಬಗ್ಗೆ ಸಂಶಯ ಇಲ್ಲ ಆದರೆ ಫಲಿತಾಂಶ ಏನಾಯಿತು ? ಎರಡು ವರ್ಷಗಳಿಂದ ಐದಾರು ಸಾವಿರ ಜನ ಉಪವಾಸ ಬಿದ್ದಿದ್ದಾರೆ. ನೂರಾರು ಬಾರಿ ಚಳುವಳಿ ಮಾಡಿದ್ದಾರೆ. ಲೇಬರ್ ಮಿನಿಸ್ಟರನ್ನು, ಚೀಫ್ ಮಿನಿಸ್ಟರನ್ನು ಭೇಟಿಯಾಗಿದ್ದಾರೆ. ಪೋಲೀಸರಿಂದ ಹೊಡೆತ ತಿಂದಾಗಿದೆ. ಆದರೂ ಏನೂ ಉಪಯೋಗ ಆಗಿಲ್ಲ. ಶಂಕರ್ ಮಿಲ್ಸ್ ಬಗ್ಗೆ ಮಾತನಾಡುವಾಗ ಮಂತ್ರಿಗಳು ನಾವು ಅದನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಎಂದು ಹೇಳಿದ್ದಾರೆ. ಉತ್ಪಾದನೆ

ಮಾಡುವ ಜನ ಕೆಲಸಗಾರರು. ಅವರ ರಕ್ತ ಶೋಷಣೆ ಮಾಡಿ ಮಾಲೀಕರು ಕೈಬಿಟ್ಟರೆ ಅವರು ಎಲ್ಲಿ ಹೋಗಬೇಕು ? ಸರ್ಕಾರವೇ ಸುಪ್ರೀಂ ಅಥಾರಿಟಿ. ಈ ಸರ್ಕಾರ ಬಂದಮೇಲೆ ವಿಧವೆಯರಿಗೆ ಪೆನ್‌ಷನ್ ಕೊಟ್ಟಿತು. ಜನರಿಗೆ ಸೀರೆ, ಧೋತ್ರಾ ಕೊಟ್ಟಿತು. ಆದರೆ ಯಾರು ಉತ್ಪಾದನೆ ಮಾಡುತ್ತಾರೆ, ಯಾರು ಕಷ್ಟಪಡುತ್ತಿದ್ದಾರೆ ಆ ಮನುಷ್ಯ ಉಪವಾಸ ಇರುವಾಗ ಹಾಗೇ ಬಿಡುವುದು ಯಾವ ನ್ಯಾಯ ? ಸರ್ಕಾರ ಏನಾದರೂ ಕೊಡಬೇಕು. ಅವರು ಎರಡು ವರ್ಷದಿಂದ ಉಪವಾಸ ಇದ್ದಾರೆ.

ಶ್ರೀ ಜೆ. ಎಚ್. ಪಟೇಲ್.—ಕಾರ್ಮಿಕರ ಕಷ್ಟಸುಖ, ನೋವು ನಲಿವುಗಳನ್ನು ಅರ್ಥ ಮಾಡಿಕೊಳ್ಳುವ ಮಾನೋಭಾವ ಶಾಣಪ್ಪನವರಿಗೆ ಮಾತ್ರ ಇಲ್ಲ.

ಶ್ರೀ ಕೆ. ಬಿ. ಶಾಣಪ್ಪ.—ನೀವೂ ಅರ್ಥ ಮಾಡಿಕೊಂಡಿದ್ದಿರಿ.

ಶ್ರೀ ಜೆ. ಎಚ್. ಪಟೇಲ್.—ಅದನ್ನು ಅರ್ಥ ಮಾಡಿಕೊಂಡೇ ಮಾನ್ಯ ಸದಸ್ಯರ ಜೊತೆ ಕೂತು ಚರ್ಚೆ ಮಾಡಿ ಅಲ್ಲಿನ ಮಾಲೀಕರನ್ನು, ಲೀಡರ್‌ನನ್ನು ಕರೆದು ಸರ್ಕಾರ ಏನೇನು ಮಾಡುವುದಕ್ಕೆ ಸಾಧ್ಯವೋ ಅದನ್ನು ಮಾಡಿದೆ. ಹೀಗೆ ಮಾಡಲೇಬೇಕು ಎಂದು ಹೇಳುವುದಕ್ಕೆ ನಾವು ಪ್ರಜಾತಂತ್ರದಲ್ಲಿದ್ದೇವೆ. ಕಮ್ಯುನಿಸ್ಟ್‌ನಲ್ಲಿಲ್ಲ. ನಾವು ನಂಬಿರುವ ಸಿದ್ಧಾಂತ ಬೇರೆ. ಅವರು ಏತಕ್ಕೆ ಮಾಡುವುದಕ್ಕಾಗುವುದಿಲ್ಲ ಎನ್ನುತ್ತಾರೆ. ಅವರು ನಂಬಿರುವುದು ಅಂಥ ವ್ಯವಸ್ಥೆಯನ್ನು. ಆ ವ್ಯವಸ್ಥೆ ಇಲ್ಲಿಲ್ಲ, ಇದು ಬೇರೆ ವ್ಯವಸ್ಥೆ.

ಶ್ರೀ ಶಾಣಪ್ಪ.—ಪರಿಹಾರ ಏನು ಮಾಡುತ್ತೀರಿ ? ಹೇಗೆ ಬದುಕಬೇಕು ಅವರು ?

12-00 Noon

ಅಧ್ಯಕ್ಷರು.—ಈಗ ಮಾನ್ಯ ಭೂಪತಿಯವರು ಮಾತನಾಡಲಿ.

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ಹಿಂದೆ ಕೂಡಾ ಏನಾಯಿತು ಎಂದರೆ ಕೆ. ಆರ್. ಮಿಲ್ಸ್‌ನ್ನು ಕೂಡಾ ಕೇಸರಿವಾಲಾ ನಡೆಸುತ್ತಿದ್ದರು ಎಂ. ಎಸ್. ಕೆ. ಮಿಲ್‌ನ್ನು ಕೂಡಾ ಇಂದು ಇರತಕ್ಕ ಮಾಲಿಕರೇ ನಡೆಸುತ್ತಿದ್ದರು. ಅದು ಕೂಡಾ ಲಾಸ್‌ನಲ್ಲೇ ನಡೆಯುತ್ತಿತ್ತು. ಆಮೇಲೆ ಸರ್ಕಾರದವರು ವಹಿಸಿಕೊಂಡು, ಕಾರ್ಮಿಕರಿಗೆ ಕೆಲಸ ಕೊಡತಕ್ಕ ದೃಷ್ಟಿಯಿಂದ ಕೆಲವು ಬಾಡವಾಳ ಹಾಕಿ ಕೆಲವು ಎಕ್ಸ್‌ಪರ್ಟ್ಸ್‌ಗೆ ವಹಿಸಿ ಅದನ್ನು ಮುಂದುವರಿಸಲಾಯಿತು. ಕೆಲವು ದಿನಸಗಳ ಕಾಲ ಕೇಸರಿವಾಲಾ ಅವರೇ ಎಂ.ಎಸ್.ಕೆ. ಮಿಲ್ ನ್ನು ನಡೆಸಿದರು. ಇದನ್ನು ಎನ್.ಟಿ.ಸಿ ಯವರಿಗೆ ವಹಿಸಿಕೊಡಬೇಕೆಂದು ಹೇಳಿ ನಾಲ್ಕು ವರ್ಷಗಳ ಕಾಲ...

ಅಧ್ಯಕ್ಷರು.—ಖಾರ್ಗೆಯವರೇ, ಈ ಬಗ್ಗೆ ಕೂಡಾ ಇಲ್ಲಿ ಪ್ರಸ್ತಾಪ ಮಾಡಲಾಗಿದೆ. ತಾವು ಈಗ ತಾನೆ ಸದನಕ್ಕೆ ಬಂದಿದ್ದೀರಿ. ತಮಗೆ ವಿಷಯ ಪೂರ್ತಿ ತಿಳಿದಿಲ್ಲ. ತಾವು ಕುಳಿತುಕೊಳ್ಳಿ. ಈ ಬಗ್ಗೆ ಉತ್ತರವನ್ನೂ ಕೊಡಲಾಗಿದೆ, ಈಗ ಭೂಪತಿಯಂವರು ಪ್ರಶ್ನೆ ಕೇಳಲಿ.

ಶ್ರೀ ಯು. ಭೂಪತಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಯವರು ಮಾತನಾಡುತ್ತಾ ಅಲೆಂಬಿಕ್ ಗ್ಲಾಸ್ ಕಂಪೆನಿಯವರು ಕಾನೂನು ರೀತ್ಯ ಪ್ರಾಪರ್ಟಿಯನ್ನು ವರ್ಗಾವಣೆ ಮಾಡಿದ್ದಾರೆ. ಅದರಿಂದ ಸರ್ಕಾರಕ್ಕೆ ಏನೂ ಮಾಡುವುದಕ್ಕೆ ಆಗುವುದಿಲ್ಲವೆಂದು ಮಾನ್ಯ ಮಂತ್ರಿಗಳು ಹೇಳಿದರು. ಆದರೆ ವರ್ಗಾವಣೆ ಮಾಡಿರತಕ್ಕದ್ದು ವಿದ್ಯುಚ್ಛಕ್ತಿಯ ಕೊರತೆಯಿಂದ ಇದನ್ನು ಮುಚ್ಚಲಾಗಿದೆ, ಇಲ್ಲಿ ವಿವಾದ ಇದೆ. ಆದರೆ ಬೇರೆ ಉದ್ದೇಶದಿಂದ ಇವರು ಈ ನಿರ್ಣಯವನ್ನು ತೆಗೆದುಕೊಂಡಿದ್ದಾರೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದು ಹೇಳುವುದು ಸರಿಯಲ್ಲ. ಈ ಬಗ್ಗೆ ನಾವೇನೂ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ ಎನ್ನುವುದರಲ್ಲಿ ಸತ್ಯ ಇಲ್ಲ ಮಾನ್ಯ ಮಂತ್ರಿಯವರು ಮೈಗೆ ಎಣ್ಣೆ ಯನ್ನು ಹಚ್ಚಿಕೊಂಡು ಕುಸ್ತಿ ಮಾಡುತ್ತಿದ್ದಾರೆ. ಈ ರೀತಿಯ ಮನೋ ಭಾವನೆಯನ್ನು ಅವರು ಕೈಬಿಡಬೇಕು. ಎಣ್ಣೆ ಹಚ್ಚಿಕೊಂಡವರ ಮೈ ಪೆಟ್ಟಿಗೆ ಸಿಗುವುದಿಲ್ಲ. ಅವರು ಜಾರಿಕೊಳ್ಳುತ್ತಾರೆ. ಈ ಅಲೆಂಬಿಕ್ ಕಂಪೆನಿ ಬಗ್ಗೆ ಬಂದೂಕನ್ನು ತೆಗೆದುಕೊಳ್ಳುವುದನ್ನು ಬಿಟ್ಟರೆ ಬೇರೆ ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡಲಾಗಿದೆ. ಇಷ್ಟು ಸುಲಭದಲ್ಲಿ ನುಸುಳಿಕೊಳ್ಳುವುದಕ್ಕೆ ಅವಕಾಶ ಕೊಡತಕ್ಕದ್ದು ಸರಿಯಲ್ಲ. ಸರ್ಕಾರ ಈ ಮಾಲೀಕ ವರ್ಗದವರಿಗೆ ಸರಿಯಾದ ಬುದ್ಧಿಯನ್ನು ಕಲಿಸತಕ್ಕ ಕೆಲಸವನ್ನು ಮಾಡಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಎಚ್. ಪಟೇಲ್ — ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಮೈಗೆ ಎಣ್ಣೆ ಹಚ್ಚಿಕೊಂಡು ಕುಸ್ತಿ ಮಾಡುತ್ತಾರೆ ಎಂದು ಹೇಳಿದರು. ನಾನು ಅವರ ಪಾರ್ಟಿ ಜೊತೆ ಕುಸ್ತಿ ಮಾಡುವುದಕ್ಕೆ ಹೋಗುವುದಿಲ್ಲ. ಆದರೂ ನಿಮ್ಮ (ಶ್ರೀ ಭೂಪತಿ) ಹತ್ತಿರ ಮಾತ್ರ ಕುಸ್ತಿ ಮಾಡುವುದಕ್ಕೆ ಬರುವುದಿಲ್ಲ. ಮಾನ್ಯ ಸದಸ್ಯರು ಏನು ಹೇಳಿದ್ದಾರೆ...

ಶ್ರೀ ಎಂ. ರಾಮಪ್ಪ — ಎಣ್ಣೆ ಎಂದರೆ ಬೇರೆ ಎಣ್ಣೆ ಎಂದು ಕೂಡಾ ಆಗುತ್ತದೆ.

ಶ್ರೀ ಜೆ ಹೆಚ್. ಪಟೇಲ್.— ಅಧ್ಯಕ್ಷರೇ, ಮಾನ್ಯ ರಾಮಪ್ಪನವರು ಏನು ಕುಡಿತದ ಬಗ್ಗೆ ಇಷ್ಟು ಲಘುವಾಗಿ ಏನು ಈ ಸದನದಲ್ಲಿ ಹೇಳುತ್ತಿದ್ದಾರೆ ಈ ಬಗ್ಗೆ ತಾವು ಎಚ್ಚರಿಕೆಯನ್ನು ಕೊಡಬೇಕಾಗುತ್ತದೆ. ಇಲ್ಲಿ ಸದನದ ಗಂಭೀರತೆಯನ್ನು ನೋಡಬೇಕಾಗುತ್ತದೆ. ಯಾವುದೇ ವಿಷಯದ ಬಗ್ಗೆ ಹೇಳುವಾಗ ಅಷ್ಟು ಲೈಪಿಚ್ ಆಗಿ..... ಸದಾಶಿವನಿಗೆ ಅದೇ ಜ್ಞಾನ, ಏನು ಮಾಡುವುದು ? ಅದು ಇಲ್ಲಿ ಬೇಡ. ಮಾನ್ಯ ಕೆ.ಹೆಚ್. ಶ್ರೀನಿವಾಸ್ ಅವರು ಹೇಳುವ ಹಾಗೆ ಕೈಗೆ ಗಂಧವನ್ನು ಹಚ್ಚಿಕೊಂಡಿರುವವರ ಜೊತೆ ನಾನು ಕುಸ್ತಿ ಮಾಡುತ್ತೇನೆಯೇ ಹೊರತು ಕೈಗೆ ಸಗಣಿಯನ್ನು ಹಚ್ಚಿಕೊಂಡಿರುವವರ ಹತ್ತಿರ ಕುಸ್ತಿ ಮಾಡಲು ಹೋಗುವುದಿಲ್ಲ. ಇನ್ನು ಮಾನ್ಯ ಭೂಪತಿಯವರು ಹೇಳಿರುವ ಹಾಗೆ ಇದುವರೆಗೂ ಕೂಡಾ ಅಲೆಂಬಿಕ್ ಗ್ಲಾಸ್ ಕಂಪನಿಯವರು ಆ ರೀತಿ ಟ್ರಾನ್ಸ್‌ಫರ್ ಮಾಡಿರತಕ್ಕ ವಿಷಯ ನಮ್ಮ ನೋಟೀಸ್‌ಗೆ ಬಂದಿಲ್ಲ.

ಶ್ರೀ ಯು. ಭೂಪತಿ.— ಅದು ಬಂದಿದೆ. ನಾವು ಆ ಬಗ್ಗೆ ಬರೆದುಕೊಟ್ಟಿದ್ದೇವೆ.

ಶ್ರೀ ಜೆ. ಹೆಚ್. ಪಟೇಲ್.— ಯಾವಾಗ ?

ಶ್ರೀ ಯು. ಭೂಪತಿ.— ಮಾನ್ಯ ಮಂತ್ರಿಗಳಿಗೆ ನಾವು ತಿಳಿಸಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ಮಂತ್ರಿಗಳಿಗೆ ಕಳುಹಿಸಿಕೊಟ್ಟಿದ್ದೇವೆ ಅದನು ನೋಡಲು ಮಾನ್ಯ ಮಂತ್ರಿಗಳಿಗೆ ಟೈಮ್ ಇಲ್ಲ ಎಂದು ಕಾಣುತ್ತದೆ. ಈ ಬಗ್ಗೆ ನಿಮ್ಮ ಸೆಕ್ರೆಟರಿಯವರ ಜೊತೆ ಚರ್ಚೆ ಮಾಡಿದ್ದೇವೆ ಎಲ್ಲಾ ರೀತಿಯ ಚರ್ಚೆಯನ್ನು ಮಾಡಿ ಈ ಪರಿಸ್ಥಿತಿಗೆ ಬಂದಾಗ...

ಶ್ರೀ ಜೆ. ಹೆಚ್. ಪಟೇಲ್. — ಕಾನೂನಿಗೆ ವಿರುದ್ಧವಾಗಿ ಟ್ರಾನ್ಸ್‌ಫರ್ ಮಾಡಿದ್ದಾರಾ ? How can you prevent a man transferring any property legally ?

ಶ್ರೀ ಯು ಭೂಪತಿ.— ಸಾಮಾನ್ಯ ಪರಿಸ್ಥಿತಿಯಲ್ಲಿ ವರ್ಗಾವಣೆ ಮಾಡಿದ್ದರೆ ಆ ಪ್ರಶ್ನೆ ಬೇರೆ. ಆದರೆ ಪರಿಸ್ಥಿತಿ ಬೇರೆ ಇದ್ದಾಗ...

ಶ್ರೀ ಜೆ. ಹೆಚ್. ಪಟೇಲ್, — ಈಗಲೂ ಕೂಡಾ ಕಾರ್ಮಿಕ ಸಚಿವರೂ ನಾನೂ ಕೂಡಿ ಅಲ್ಲಿನ ಮಾಲೀಕರಿಗೆ ಹಲವು ರೀತಿಯ ಒತ್ತಡಗಳನ್ನು ತರುತ್ತಿದ್ದೇವೆ. ಆ ಕಾರ್ಮಿಕರಿಗೆ ಯಾವ ರೀತಿಯಿಂದ ಕೆಲಸ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತಿದ್ದೇವೆ. ಈ ಬಗ್ಗೆ ಹೆಚ್ಚು ಪ್ರಯತ್ನ ಮಾಡಬಹುದು. ಅದಕ್ಕಿಂತಲೂ ಹೆಚ್ಚು ಮಾಡಿ ಟೇಕ್ ಓವರ್ ಮಾಡುತ್ತೇವೆಂದು ಹೇಳುವುದು ನಮ್ಮ ಸರ್ಕಾರದ ಧಿಕಾರದಲ್ಲಿ ಇಲ್ಲ. ಅದು ನಮ್ಮ ಭಾಷೆಯಲ್ಲಿಯೂ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.— ಅಧ್ಯಕ್ಷರೇ...

ಅಧ್ಯಕ್ಷರು.— ನೀವು ನಾಲ್ಕು ಪಾಂಡಿ ಇದ್ದೀರಿ. ನೀವುಗಳು ಹೋಗಿ ಅವರ ಜೊತೆ ಡಿಸ್‌ಕಷನ್ಸ್ ಮಾಡಿ. ಇದನ್ನು ಇಲ್ಲಿಗೆ ಮುಕ್ತಾಯ ಮಾಡೋಣ.

ಶ್ರೀ ಎಂ. ಎಸ್. ಕೃಷ್ಣನ್.— ಮಾನ್ಯ ಮಂತ್ರಿಗಳ ಉತ್ತರ ಸಮಂಜಸವಾಗಲಿಲ್ಲ. ಅದನ್ನು ನಾವು ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆಂದು ಮಾನ್ಯ ಮಂತ್ರಿಗಳು ಹೇಳಿದರು ಅವರ ಅಧಿಕಾರದಲ್ಲಿ ಕೂಡಾ ಅದು ಆಗುವುದಿಲ್ಲವೆಂದು ಹೇಳುತ್ತಿದ್ದಾರೆ ಇದರ ಬಗ್ಗೆ ಒಂದೇ ಒಂದು ಮಂತ್ರವನ್ನು ಹೇಳುತ್ತಿದ್ದಾರೆ ಈ ಬಗ್ಗೆ ರಾಜಕೀಯ ಸ್ಥೈರ್ಯ ಇದ್ದರೆ ಖಂಡಿತವಾ ಸಾಧ್ಯವಾಗುತ್ತದೆ. ಹಿಂದೆ ಕೂಡಾ ಈ ರೀತಿ ಎಷ್ಟೋ ವಿಷಯಗಳು ಬಂದಾಗ ಬಗೆಹರಿಸಲಾಗಿದೆ. ಆದ್ದರಿಂದ ಮಾನ್ಯ ಮಂತ್ರಿಗಳು ಈ ರೀತಿ ಹೇಳುವುದು ಸರಿಯಲ್ಲ, ಹಾಗೂ ಸಮಂಜಸವೂ ಅಲ್ಲ. ಅದಕ್ಕೋಸ್ಕರ ಈ ಬಗ್ಗೆ ನಾವು ಪ್ರತಿಭಟನೆ

ಮಾಡಿ ನಾನು ನಮ್ಮ ನಮ್ಮ ಪಕ್ಷದ ಸದಸ್ಯರು ಸಭೆಯಿಂದ ಹೊರಗೆ ಹೋಗುತ್ತಿದ್ದೇವೆ. ಆದ್ದರಿಂದ ಕಾರ್ಯಕ್ರಮವನ್ನು ತೆಗೆದುಕೊಳ್ಳುವ ಬಗ್ಗೆ ನಿಮಗೇ ಬಿಡುತ್ತೇವೆ.

(ಈ ಸಮಯದಲ್ಲಿ ಮಾನ್ಯ ಕೃಷ್ಣನ್ ಅವರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು.— ಈಗ ಮಾನ್ಯ ವೆಂಕಟರಾಮಯ್ಯನವರ ಗಮನ ಸೆಳೆಯುವ ಸೂಚನೆ ತೆಗೆದುಕೊಳ್ಳೋಣ.

ಶ್ರೀ ಪಂಪಾಪತಿ.— ಅಧ್ಯಕ್ಷರೇ, ಕಳೆದ ಎರಡು ವರ್ಷಗಳಿಂದಲೂ ಈ ಬಗ್ಗೆ...

(ಗೊಂದಲ)

ಶ್ರೀ ಕೆ. ಬಿ. ಶಾಣಪ್ಪ.— ಅಧ್ಯಕ್ಷರೇ, ಅಲ್ಲಿಗೆ ವಿದ್ಯುತ್...

(ಗೊಂದಲ)

ಶ್ರೀ ಸಿ. ಭೈರೇಗೌಡ.— ಸಂಸ್ಥೆಯಲ್ಲಿ ಮಳೆ ಬಂದಾಗ ಉಪ್ಪಿನವನು ಬಡಕೊಂಡಿದ್ದನ್ನು ನೋಡಿ ತೆಂಗಿನಕಾಯಿಯವನೂ ಬಡಕೊಂಡನಂತೆ. ಇವತ್ತು ಸಾವಿರಾರು ರೈತರಿಗೆ ವಿದ್ಯುತ್‌ನ್ನು ಕೊಟ್ಟರೆ ಬೆಳೆ ಬೆಳೆಯಬಹುದು. ಈ ಕಾರ್ಖಾನೆಗೆ ಕೊಡಬೇಕೆಂದು...

(ಗೊಂದಲ)

ಶ್ರೀ ಪಂಪಾಪತಿ.— ಟೇವ್ ಪ್ರಕರಣದಿಂದ ಏಕ್‌ದಮ್ ಮಂತ್ರಿಯಾಗಿಬಿಟ್ಟು ಇಷ್ಟು ಮಾತ ನಾಡುತ್ತಾರೆ. ರೈತರ ಬಗ್ಗೆ ನಮಗೂ ಕಳಕಳಿ ಇದೆ. ರೈತರ ಬಗ್ಗೆ ನಾವೂ ಕೂಡಾ ಹೆಚ್ಚು ಹೋರಾಟ ಮಾಡಿದ್ದೇವೆ. ಇವತ್ತು ರೈತರಂತೆ ಕಾರ್ಮಿಕರಿಗೂ ನ್ಯಾಯ ಬೇಡವೇ ? ಅದೊಂದು ಬಿಟ್ಟರೆ ಅವರಿಗೆ ಬೇರೆ ಏನು ಇದೆ ?

(ಗೊಂದಲ)

ಅಧ್ಯಕ್ಷರು.— ನೀವು ಈ ರೀತಿ ಪ್ರಾತಸಾಡಿದರೆ ನಾನು ರೆಕಾರ್ಡ್ ಮಾಡಬೇಡಿ ಎಂದು ಹೇಳ ಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು.— ಈಗ ನೀವು ಏನು ಹೇಳಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಪಂಪಾಪತಿ.— ಇವರಿಗೆ...

(ಗೊಂದಲ)

ಶ್ರೀ ಸಿ. ಭೈರೇಗೌಡ.— ತಾವು ಕುಳಿತುಕೊಳ್ಳಿ ಸ್ವಾಮಿ.

(ಗೊಂದಲ)

ಶ್ರೀ ಪಂಪಾಪತಿ.— ಏಕ್‌ದಮ್ ಮಿನಿಸ್ಟರ್ ಆದವರು ಇವರು. ಕಾರ್ಮಿಕರ ಕಷ್ಟ ನಷ್ಟ ಗೊತ್ತಿದೆ.

ಅಧ್ಯಕ್ಷರು.— Don't Record. ಈಗ ಪಂಪಾಪತಿಯವರು ಏನು ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ.

* * * * *

ಅಧ್ಯಕ್ಷರು.— ಈಗ ಮಾನ್ಯ ವೆಂಕಟರಾಮಯ್ಯನವರು ತಮ್ಮ ಗಮನ ಸೆಳೆವ ಸೂಚನೆ ಯ ಪ್ರಸ್ತಾಪ ಮಾಡಲಿ.

(ಗೊಂದಲ)

---

* ಅಧ್ಯಕ್ಷರ ಅಪ್ಪಣೆ ಮೇರೆಗೆ ರೆಕಾರ್ಡ್ ಮಾಡಲಿಲ್ಲ

ಶ್ರೀ ಪಂಪಾಪತಿ.— ಅಧ್ಯಕ್ಷರೇ, ಮಾನ್ಯ...

(ಗೊಂದಲ)

ಅಧ್ಯಕ್ಷರು.— ಭೈರೇಗೌಡರೇ ತಾವು ಏನನ್ನೂ ಮಾತನಾಡುವುದಕ್ಕೆ ಹೋಗಬೇಡಿ.

ಶ್ರೀ ಜಿ. ನಾರಾಯಣಕುಮಾರ್.— ಕಾರ್ಮಿಕರ ಬಗ್ಗೆ ನಾವೂ ಕೂಡಾ ಹೋರಾಟ ಮಾಡಿ ಕೊಂಡು ಬಂದಿದ್ದೇವೆ.

(ಗೊಂದಲ)

ಶ್ರೀ ಪಂಪಾಪತಿ.— ಈ ವಿಷಯದ ಬಗ್ಗೆ...

(ಗೊಂದಲ)

ಅಧ್ಯಕ್ಷರು.— ಇದು ವಿಧಾನಸಭೆ ಇದೆ. ಪಂಪಾಪತಿಯಂವರೇ ಮನೆಯಲ್ಲಿ ಜಗಳ ಮಾಡುವ ರೀತಿ ಮಾತನಾಡುತ್ತಿದ್ದೀರಲ್ಲಾ ?

ಶ್ರೀ ಪಂಪಾಪತಿ.— ಮಾನ್ಯ ಭೈರೇಗೌಡರು ಆ ರೀತಿ ಹೇಳಬಾರದು ಎಂದು ಹೇಳುತ್ತೇನೆ.

III. ಗುಲ್ಬರ್ಗ ಜಿಲ್ಲೆಯ ವಾಡಿ ರೈಲ್ವೆ ಸ್ಟೇಷನ್ ಬಳಿ ನಡೆದ ದರೋಡೆ.

ಶ್ರೀ ಆರ್. ವೆಂಕಟರಾಮಯ್ಯ — ಗುಲ್ಬರ್ಗ ಜಿಲ್ಲಾ ವಾಡಿ ರೈಲ್ವೆ ಸ್ಟೇಷನ್ ಬಳಿ ನಡೆದ ದರೋಡೆಯ ಬಗ್ಗೆ ಗೃಹ ಮಂತ್ರಿಗಳ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಬಿ. ರಾಚಯ್ಯ (ಮಾನ್ಯ ಗೃಹ ಮಂತ್ರಿಗಳು) — ಮಾನ್ಯ ಅಧ್ಯಕ್ಷರೇ, ದಿನಾಂಕ ೪-೩-೮೬ ರಂದು ಬೆಳಿಗ್ಗೆ ೪ ಘಂಟೆ ಸಮಯದಲ್ಲಿ ವಾಡಿ ಕಾರ್ಡ್ ಲೈನ್ ಆಚೆ ನಿಲ್ಲಿಸಿದ್ದ ೧೨೮ ಕರ್ನಾಟಕ ಎಕ್ಸ್‌ಪ್ರೆಸ್ ಟ್ರೈನಿನಲ್ಲಿ ಸೂಟ್‌ಕೇಸುಗಳು ಕಳುವಾಗಿವೆಯೆಂದು ವಾಡಿ ಪೊಲೀಸ್ ಠಾಣೆಯ ಎ. ಎಸ್. ಐ ರವರಿಗೆ ಸುದ್ದಿ ಬಂತು. ಸದರಿ ರೈಲು ನ್ಯೂ ಡೆಲ್ಲಿಯಿಂದ ಹೈದರಾಬಾದ್ ಮೂಲಕ ಬೆಂಗಳೂರಿಗೆ ಬರುತ್ತಿದ್ದು ಆದು ವಾಡಿ ರೈಲ್ವೆ ನಿಲ್ದಾಣದಲ್ಲಿ ಉಪ ಮಾರ್ಗದ ಮೂಲಕ ರಾಯಚೂರಿಗೆ ಹೋಗುವುದಿತ್ತು. ಎ. ಎಸ್. ಐ. ರವರು ಸುದ್ದಿ ತಿಳಿದ ತಕ್ಷಣ. ಇದ್ದ ಸಿಬ್ಬಂಧಿಯೊಂದಿಗೆ ಸ್ಥಳಕ್ಕೆ ಧಾವಿಸಿದರು ಮತ್ತು ವಾಡಿ ರೈಲ್ವೆ ಪೊಲೀಸ್ ಇನ್ಸ್‌ಪೆಕ್ಟರ್‌ರವರಿಗೆ ಸುದ್ದಿಯನ್ನು ತಿಳಿಸಿದರು.

ರೈಲ್ವೆ ಪೊಲೀಸ್ ಇನ್ಸ್‌ಪೆಕ್ಟರ್‌ರವರು ಕೂಡಲೇ ಸ್ಥಳಕ್ಕೆ ಧಾವಿಸಿ ಯಲಹಂಕದ ಗೋಯಲ್ ಎಂಬುವರು ಕಳ್ಳತನದ ಬಗ್ಗೆ ಜೋರು ಧ್ವನಿಯಲ್ಲಿ ಮಾತನಾಡುತ್ತಿದ್ದು ಅವರನ್ನು ಸಂಪರ್ಕಿಸಿದರು. ಸದರಿ ಗೋಯಲ್‌ರವರು ಬಾಯಿ ಮಾತಿನಲ್ಲಿ ತನ್ನ ಸೂಟ್‌ಕೇಸೂ ಸೇರಿದಂತೆ ಆರು ಸೂಟ್‌ಕೇಸುಗಳನ್ನು ಯಾರೋ ಅಪರಿಚಿತ ವ್ಯಕ್ತಿಗಳು ಹೈದರಾಬಾದ್ ಮತ್ತು ವಾಡಿ ಮಧ್ಯೆ ಕಳುವು ಮಾಡಿದ್ದಾರೆಂದು ಹೇಳಿದರು. ಅವರು ಮುಂದುವರೆಯುತ್ತಾ ರೈಲು ಹೈದರಾಬಾದನ್ನು ಬಿಟ್ಟಮೇಲೆ ಎರಡು ಮತ್ತು ಮೂರು ಘಂಟೆ ಮಧ್ಯದ ಸಮಯದಲ್ಲಿ ಮೇಲ್ಕಂಡ ಸೂಟ್‌ಕೇಸುಗಳನ್ನು ಕೆಲವು ಅಪರಿಚಿತ ವ್ಯಕ್ತಿಗಳು ಕಳವು ಮಾಡಿದ್ದಾರೆಂದು ಹೇಳಿದರು. ರೈಲ್ವೆ ಪೊಲೀಸ್ ಇನ್ಸ್‌ಪೆಕ್ಟರ್‌ರವರು ಸೂಟುಕೇಸುಗಳನ್ನು ಇಟ್ಟಿದ್ದ ವಿಶೇಷ ತರಗತಿಯ ಮೂರು ಟಯರಿನ ಬೋಗಿಗಳನ್ನು ಶೋಧಿಸಿದರು. ಈ ಬೋಗಿಯಂತ ಇಂಜಿನ್ನಿನಿಂದ ಮೂರನೆಯದಾಗಿದ್ದು, ಮಹಿಳೆಯರ ಕೋಣೆಗೆ ಬೇರೆ ಬಾಗಿಲು ಇರಲಿಲ್ಲ. ಆ ಬೋಗಿಯ ವೆಸ್ಟಿಬುಲ್ ಕ್ಯಾನ್‌ವಾಸ್‌ನ ಬಟ್ಟೆಯು ಹರಿದಿದ್ದು, ದುಷ್ಕರ್ಮಿಗಳು ಅದನ್ನೂ ಬೋಗಿಯ ಒಳಗಡೆ ಹೋಗುವುದಕ್ಕೆ ಮತ್ತು ಹೊರಗಡೆ ಬರುವುದಕ್ಕೆ ಉಪಯೋಗಿಸಿಕೊಂಡಿರಬಹುದೆಂದು ಭಾವಿಸಲಾಗಿದೆ. ವಾಡಿಯಲ್ಲಿ ರೈಲನ್ನು ನಿಲುಗಡೆ ಮಾಡದೇ ಇರುವುದರಿಂದ ರೈಲು ಕೂಡಲೇ ರಾಯಚೂರು ಕಡೆಗೆ ಹೊರಟಿತ್ತು. ರೈಲು ನಿಲ್ಲಿಸುವುದರಿಂದ ಪ್ರಯಾಣಿಕರಿಗೆ ಆಗುವ ತೊಂದರೆಯನ್ನು ತಪ್ಪಿಸಲು ರೈಲ್ವೆ ಪೊಲೀಸ್ ಇನ್ಸ್‌ಪೆಕ್ಟರ್‌ರವರು ಎ. ಎಸ್. ಐ. ರವರನ್ನು ಇತರ ಸಿಬ್ಬಂಧಿಯೊಂದಿಗೆ ವಸ್ತುಗಳನ್ನು ಕಳೆದುಕೊಂಡವರ ಹೇಳಿಕೆಯನ್ನು ಪಡೆಯಲು ರೈಲಿನಲ್ಲಿ ಕಳುಹಿಸಿದರು. ನಂತರ ಒಬ್ಬ ಆರಕ್ಷಕ ಮುಖ್ಯ ಪೇದೆ ಮತ್ತು ಆರಕ್ಷಕ ಪೇದೆಗಳನ್ನು ವಿಕರಾಬಾದ್ ಕಡೆಗೆ ಕಳುಹಿಸಿದ ವಸ್ತುಗಳನ್ನೂ ಹಾಗೂ ದುಷ್ಕರ್ಮಿಗಳನ್ನು ಪತ್ತೆ ಹಚ್ಚಲು ರೈಲು ಕಂಬಿಯ ಮೇಲೆ ಕಳುಹಿಸಿದರು. ರೈಲ್ವೆ ಪೊಲೀಸ್ ಇನ್ಸ್‌ಪೆಕ್ಟರ್‌ರವರು ಸ್ಥಳದಲ್ಲಿಯೇ ಇದ್ದು, ಉಳಿದ ಸಿಬ್ಬಂಧಿಯೊಂದಿಗೆ ಐದಾರು ಕಿ.ಮೀ. ಸುತ್ತಳತೆಯ ಪ್ರದೇಶದಲ್ಲಿರುವ ರೈಲು ಕಂಬಿ ಹಾಗೂ ಪಕ್ಕದ ಹಳ್ಳಿಗಳನ್ನು ಶೋಧಿಸಿದರು. ಆದರೆ ಯಾವ ಸುಳಿವೂ ಸಿಗಲಿಲ್ಲ.